ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 75-79
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಜಾನಪದಗಳ ತವರೂರು ಗಡಿನಾಡ ಜಿಲ್ಲೆ ಚಾಮರಾಜನಗರ

**ನವೀನ ಎಸ್.ಎಂ.[1] ಮತ್ತು ಪ್ರೊ.ಜೆ.ಸೋಮಶೇಖರ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

***Abstract:***
*ಚಾಮರಾಜನಗರ ಜಿಲ್ಲೆಯು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ತಮಿಳುನಾಡು ಮತ್ತು ಕೇರಳ ರಾಜ್ಯಗಳೊಂದಿಗೆ ಗಡಿಹಂಚಿಕೊಂಡಿದೆ. ಜಾನಪದಗಳ ತವರೂರು, ವನ್ಯ ಮೃಗಗಳ ಆಶ್ರಯತಾಣ ಎಂಬ ಹಲವು ವಿಶೇಷತೆಗಳನ್ನು ಹೊಂದಿದೆ. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಸೀಮೆ. ಹೆಚ್ಚು ಅರಣ್ಯದಿಂದ ಕೂಡಿರುವ ಹಾಗೂ ಅತಿ ಹೆಚ್ಚು ಶ್ರೀಗಂಧದ ಮರಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ಹಾಗೆಯೇ ಹುಲಿ ಸಂರಕ್ಷಿತ ಪ್ರದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಗ್ರಾನೈಟ್ ಶಿಲೆಯ ವಿದೇಶಿ ಸರಬರಾಜಿನ ಮೂಲಕ ಹೆಸರು ಮಾಡಿರುವ ಗರಿಮೆಯನ್ನು ಜಿಲ್ಲೆ ಹೊಂದಿದೆ.*

**Keywords:** *ಚಾಮರಾಜನಗರ, ಜಾನಪದ ಸಂಸ್ಕೃತಿ, ಗಡಿನಾಡು, ಜಾನಪದ ಮಹಾಕಾವ್ಯಗಳು, ಜಾನಪದ ಕುಣಿತಗಳು.*

## ಪೀಠಿಕೆ

ಚಾಮರಾಜನಗರ ಜಿಲ್ಲೆ ಕರ್ನಾಟಕದ ದಕ್ಷಿಣದ ಗಡಿ ಜಿಲ್ಲೆಯಾಗಿದ್ದು, ಮೈಸೂರಿನ ಅರಸರಾಗಿದ್ದ ಮೂರನೇ ಕೃಷ್ಣರಾಜ ಒಡೆಯರ್ ರವರ ತಂದೆ ಚಾಮರಾಜ ಒಡೆಯರ್ ರವರ ಜನ್ಮ ಸ್ಥಳವಾಗಿದ್ದ ಅರಿಕುಠಾರ ಎಂಬ ಹೆಸರಿನ ಊರು 1818 ರಲ್ಲಿ ಅವರ ಸವಿನೆನಪಿಗಾಗಿ ಚಾಮರಾಜನಗರವೆಂದು ನಾಮಕರಣಗೊಂಡಿತು. 1825 ರಲ್ಲಿ ಚಾಮರಾಜೇಶ್ವರ ದೇವಸ್ಥಾನವನ್ನು ನಗರದ ಹೃದಯ ಭಾಗದಲ್ಲಿ ನಿರ್ಮಿಸಲಾಯಿತು. 1874 ರಿಂದಲೂ ತಾಲೂಕು ಕೇಂದ್ರವಾಗಿದ್ದ ಚಾಮರಾಜನಗರವು ಮೈಸೂರು ಜಿಲ್ಲೆಯಿಂದ 1997 ಆಗಸ್ಟ್ 15 ರಂದು ಬೇರ್ಪಟ್ಟು ಸ್ವತಂತ್ರ ಜಿಲ್ಲೆಯಾಯಿತು. ಈ ಜಿಲ್ಲೆಯು ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು ಮತ್ತು ಹನೂರು ತಾಲೂಕುಗಳನ್ನೊಳಗೊಂಡಿದ್ದು, ದಕ್ಷಿಣ ಒಳನಾಡಿನಲ್ಲಿ ಎಲೆ ಉದುರುವ ಹಾಗೂ ಮಳೆಗಾಲದಲ್ಲಿ ಸದಾ ಹಸಿರಾಗಿರುವ ಅರಣ್ಯಗಳ ಸಾಲುಗಳನ್ನು ಹೊಂದಿದೆ. ತಮಿಳುನಾಡು ಮತ್ತು ಕೇರಳ ಗಡಿಗಳಿಗೆ ಹೊಂದಿಕೊಂಡಿರುವ ಈ ಜಿಲ್ಲೆಯು 5685 ಚ.ಕಿ.ಮೀ ವಿಸ್ತೀರ್ಣ ಹೊಂದಿದೆ. ಪೂರ್ವ ಮತ್ತು ಪಶ್ಚಿಮ ಘಟ್ಟ ಸಂಧಿಸುವ ನೀಲಗಿರಿ ಅರಣ್ಯ ವ್ಯಾಪ್ತಿಯಲ್ಲಿ ಬಿಳಿಗಿರಿರಂಗನಬೆಟ್ಟ ವನ್ಯಧಾಮ ಮತ್ತು ಬಂಡೀಪುರ ರಾಷ್ಟ್ರೀಯ ಹುಲಿ ಅಭಯಾರಣ್ಯವು 1413 ಚ.ಕಿ.ಮೀ ವಿಸ್ತೀರ್ಣದಲ್ಲಿ ಹಬ್ಬಿದೆ. ಜಿಲ್ಲೆಯಲ್ಲಿ ಆನೆ, ಹುಲಿ, ಕಾಡುಕೋಣ, ಸೀಳುನಾಯಿ, ಜಿಂಕೆ, ಕರಡಿ, ಸಾರಂಗ, ಸಿಂಗಳೀಕ, ನವಿಲು ಇನ್ನಿತರ ಅಪರೂಪದ

***Please cite this article as:*** ನವೀನ ಎಸ್.ಎಂ. & ಜೆ. ಸೋಮಶೇಖರ್. (2023). ಜಾನಪದಗಳ ತವರೂರು ಗಡಿನಾಡ ಜಿಲ್ಲೆ ಚಾಮರಾಜನಗರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 75–79

ಕೀಟ ಪ್ರಭೇಧಗಳನ್ನು ಒಳಗೊಂಡಿದೆ ಹಾಗೂ ಶ್ರೀಗಂಧ, ಬೀಟೆ, ಹೊನ್ನೆ, ನೀಲಗಿರಿ ಮತ್ತು ಬಿದಿರು ಮುಂತಾದ ವೃಕ್ಷಗಳ ಜೀವ ವೈವಿಧ್ಯತೆಗಳು ಕಂಡು ಬರುತ್ತದೆ. ಈ ಭಾಗದಲ್ಲಿ ಜೀವನದಿಗಳಾದ ಸುವರ್ಣಾವತಿ, ಚಿಕ್ಕಹೊಳೆ, ಕಬಿನಿ, ಗುಂಡ್ಲುನದಿ, ಕಾವೇರಿ ನದಿ 110 ಕಿ.ಮೀ ದೂರವನ್ನು ಕ್ರಮಿಸಿ ಗಗನಚುಕ್ಕಿ–ಭರಚುಕ್ಕಿ ಜಲಪಾತಗಳನ್ನು ಸೃಷ್ಟಿಸಿ 1902 ರಲ್ಲಿ ಏಷ್ಯಾಖಂಡದಲ್ಲಿ ಮೊದಲ ವಿದ್ಯುತ್ ತಯಾರಿಕಾ ನೆಲೆಯಾಗಿದೆ. ಮುಂದೆ ಹೊಗೆನಕಲ್ ಜಲಪಾತ ನೈಸರ್ಗಿಕ ಶಿಲೆಗಳನ್ನು ಸೃಷ್ಟಿಸಿದೆ. ಇಲ್ಲಿನ ನೈಸರ್ಗಿಕ ಜಲಪಾತಗಳು ಆಕರ್ಷಣೀಯ ತಾಣಗಳಾಗಿವೆ.

ಕೃಷಿ ಜಿಲ್ಲೆಯ ಜೀವಾಳವಾಗಿದೆ. ಬಹುಸಂಖ್ಯಾತರು ಮಳೆಯನ್ನು ಆಶ್ರಯಿಸಿ ಬೆಳೆಯನ್ನು ಬೆಳೆಯುವ ಪದ್ಧತಿ ರೂಢಿಯಲ್ಲಿ ಬಂದಿದೆ. ಇಲ್ಲಿ ಅತಿ ಹೆಚ್ಚಾಗಿ ಅರಿಶಿಣ, ಈರುಳ್ಳಿ, ಬಾಳೆ ಇತ್ಯಾದಿ ಫಸಲಿಗೆ ಪಕ್ಕದ ತಮಿಳುನಾಡು ಮತ್ತು ಕೇರಳ ರಾಜ್ಯಗಳೇ ಮಾರುಕಟ್ಟೆಗೆ ಆಧಾರ ಎಂದೇ ಹೇಳಬಹುದು. ಚಾಮರಾಜನಗರವು ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿದ್ದು, ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು, ಉಮ್ಮತ್ತೂರು ಪಾಳೆಗಾರರು ಹೀಗೆ ವಿವಿಧ ರಾಜಮನೆತನಗಳು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿವೆ. ಪ್ರಸ್ತುತ ಸಂದರ್ಭದಲ್ಲಿ ರಾಜಕೀಯ ವ್ಯವಸ್ಥೆಯಲ್ಲಿಯೂ ಸಹ ಒಂದಷ್ಟು ಪ್ರಗತಿಯನ್ನು ಕಾಣಬಹುದಾಗಿದೆ.

ಈಗಾಗಲೇ ಹೇಳಿದಂತೆ ಜಿಲ್ಲೆಯು ಜನಪದಗಳ ತವರೂರು. ಪ್ರತಿಷ್ಠಿತ ಮಹಾಕಾವ್ಯಗಳಾದ ಮಲೆಮಹದೇಶ್ವರರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಸಿದ್ಧಪ್ಪಾಜಿ ಪವಾಡಗಳು, ಚಾಮರಾಜನಗರದ ಹಿರಿಮೆಯನ್ನು ರಾಷ್ಟ್ರಮಟ್ಟದಲ್ಲಿ ಕಾಣುವಂತೆ ಮಾಡಿವೆ. ಕಂಸಾಳೆ, ವೀರಗಾಸೆ, ನಂದಿಧ್ವಜ ಕುಣಿತ, ಗೊರವರ ಕುಣಿತ, ಕತ್ತಿವರಸೆ, ದೊಣ್ಣೆವರಸೆ, ಈರಮಕ್ಕಳ ಕುಣಿತ, ತಮಟೆ ಕುಣಿತ, ಲಂಬಾಣಿ ಕುಣಿತ, ಪಿನಾಸಿ ನೃತ್ಯ, ಗೊರುಕಾನ ಕುಣಿತ, ಸೋಬಾನೆ ಪದ, ಕೋಲಾಟ, ಟಿಬೆಟಿಯನ್ನರ ಕುಣಿತ ಇನ್ನೂ ಮುಂತಾದವು ಈ ಭಾಗದ ಕಲೆಗಳಾಗಿವೆ.

ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಸೇರಿದಂತೆ ಧಾರ್ಮಿಕ ಕೇಂದ್ರಗಳಾಗಿ ನೋಡುವುದಾದರೆ ಜಿಲ್ಲೆಯ ಪ್ರಸಿದ್ಧ ಪುಣ್ಯ ಕ್ಷೇತ್ರಗಳಾದ ಬಿಳಿಗಿರಿ ರಂಗನಬೆಟ್ಟ, ಮಹದೇಶ್ವರ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಚಿಕ್ಕಲ್ಲೂರು ಸಿದ್ಧಪ್ಪಾಜಿ, ಹುಲುಗಿನ ಮುರಡಿ ಬೆಟ್ಟ, ಮರಡಿಗುಡ್ಡ, ಬಂಡೀಪುರ ರಾಷ್ಟ್ರೀಯ ಅಭಯಾರಣ್ಯ, ಬಿ.ಆರ್.ಟಿ ಪ್ರಾಜೆಕ್ಟ್, ಕೆ.ಗುಡಿ ಗಗನಚುಕ್ಕಿ ಭರಚುಕ್ಕಿ ಹೀಗೆ ಪಟ್ಟಿ ಮಾಡುತ್ತಾ ಹೋದರೆ ಇನ್ನೂ ಬೆಳೆಯುತ್ತವೆ. ಜಿಲ್ಲೆಯ ಪ್ರವಾಸಿ ತಾಣಗಳು ದೇಶವಿದೇಶಗಳಿಂದಲೂ ಸಹ ಇಲ್ಲಿನ ಸೊಬಗು ಜನರನ್ನು ಕೈಬೀಸಿ ಕರೆಯುತ್ತಿದೆ.

ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಗಮನಿಸುವುದಾದರೆ ಕಳೆದ 25 ವರ್ಷಗಳ ಹಿಂದಿನ ವ್ಯವಸ್ಥೆಗೆ ಹೋಲಿಸಿದರೆ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಸರ್ಕಾರಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್, ಚಾಮರಾಜನಗರ ವಿಶ್ವವಿದ್ಯಾನಿಲಯ (ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ,) ವೈದ್ಯಕೀಯ ನರ್ಸಿಂಗ್ ಶಾಲೆಗಳು, ಹಾಗೂ ಜಿಲ್ಲಾ ವೈದ್ಯಕೀಯ ಮತ್ತು ಸಂಶೋಧನ ಕೇಂದ್ರವಿದ್ದು ನಿಟ್ಟುಸಿರು ಬಿಡುವಂತಾಗಿದೆ. ಕಾಡಂಚಿನ ಗ್ರಾಮದ ಜನರು ವೃತ್ತಿಪರ ಕೋರ್ಸ್ ಮತ್ತು ಉನ್ನತ ಶಿಕ್ಷಣಕ್ಕಾಗಿ ಬೇರೆಬೇರೆ ಜಿಲ್ಲೆಗೆ ಅಲೆದಾಡುವ ಪರಿಸ್ಥಿತಿಯೂ ತುಸು ತಪ್ಪಿದೆ ಎಂದರೆ ತಪ್ಪಾಗಲಾರದು.

ಆದರೆ ಜಿಲ್ಲೆಯಾಗಿ 25 ವರ್ಷಗಳ ಈ ಸಂದರ್ಭದಲ್ಲಿ ಜಿಲ್ಲೆ ಕಂಡ ಪ್ರಗತಿ ತೃಪ್ತಿಕರವಾಗಿಲ್ಲ. ಇನ್ನಷ್ಟು ಉತ್ತೇಜನ ಕೊಡಬೇಕಾಗಿತ್ತು ಎಂದೆನಿಸುತ್ತದೆ. ಇಲ್ಲಿ ಇನ್ನೂ ಅನೇಕ ಗ್ರಾಮಗಳಿಗೆ ಕುಡಿಯುವ ನೀರು, ಉತ್ತಮ ರಸ್ತೆ, ಒಳಚರಂಡಿ, ಶುಚಿತ್ವ, ನೈರ್ಮಲ್ಯ, ಆರೋಗ್ಯದ ಬಗ್ಗೆ ಜಾಗೃತಿ, ಸಾರಿಗೆ ಸಂಪರ್ಕ, ಕೆರೆಗೆ ನೀರು ತುಂಬಿಸುವ ಕೆಲಸ, ನದಿ,

ಕೆರೆ ಜೀರ್ಣೋದ್ಧಾರ ಪ್ರವಾಸಿ ತಾಣಗಳ ಅಭಿವೃದ್ಧಿ, ಭೌಗೋಳಿಕ ಮಾನ್ಯತೆ, ರೈಲು ಸಂಪರ್ಕ, ಆಧುನಿಕ ಕೃಷಿ ಸಂಸ್ಕರಣೆ ಕೇಂದ್ರಗಳ ಸ್ಥಾಪನೆ, ಉಗ್ರಾಣಗಳ ಸ್ಥಾಪನೆ ಜಿಲ್ಲಾ ಕೇಂದ್ರದಲ್ಲಿ ಇನ್ನೂ ಹೆಚ್ಚಿನ ಆಧುನಿಕ ತಂತ್ರಜ್ಞಾನದ ಬಳಕೆಯೊಂದಿಗೆ ಎಲ್ಲಾ ಇಲಾಖೆಗಳ ಉನ್ನತೀಕರಣ, ಗೃಹ ಕೈಗಾರಿಕೆಗಳು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ ಮಾಡುವುದರ ಮೂಲಕ ಜಿಲ್ಲೆಯ ಹೆಚ್ಚು ಜನರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವುದರ ಮೂಲಕ ಅವರನ್ನು ಸಧೃಡರನ್ನಾಗಿಸುವುದು, ಶೈಕ್ಷಣಿಕ ಅಭಿವೃದ್ಧಿಗಾಗಿ ಮತ್ತಷ್ಟು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು ಜಿಲ್ಲೆಯ ಕಲೆ, ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಜಿಲ್ಲಾ ಕೇಂದ್ರದಲ್ಲಿ ಕಲೆಗಳ ಕೇಂದ್ರವನ್ನು ಸ್ಥಾಪಿಸುವುದು ಮುಖ್ಯವಾಗಿದೆ. ಮತ್ತಷ್ಟು ಅಭಿವೃದ್ಧಿ ಪರವಾದ ಕೆಲಸಗಳನ್ನು ಮಾಡುತ್ತ, ಸವಲತ್ತುಗಳನ್ನು ಜಿಲ್ಲೆಗೆ ಕಲ್ಪಿಸಿದರೆ 'ಶಾಪಗ್ರಸ್ಥ ಜಿಲ್ಲೆ' ಎಂಬ ನಾಮಹೋಗಿ ಒಂದು ಮಾದರಿ ಜಿಲ್ಲೆಯಾಗಿ ಹೊರಹೊಮ್ಮಲು ಸಹಕಾರಿಯಾಗುತ್ತದೆ.

ಚಾಮರಾಜನಗರಕ್ಕೆ ಮುಖ್ಯಮಂತ್ರಿಗಳು ಭೇಟಿ ನೀಡಿದರೆ ಆರು ತಿಂಗಳಲ್ಲಿ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮೂಢನಂಬಿಕೆ ಬಹು ಹಿಂದಿನ ವರ್ಷಗಳಿಂದಲೂ ಇದೆ. ಚಾಮರಾಜನಗರವು ಶಾಪಗ್ರಸ್ತ ಜಿಲ್ಲೆ ಎಂಬುದನ್ನು ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪಟ್ಟಣಕ್ಕೆ ಹತ್ತು ಬಾರಿ ಜಿಲ್ಲೆಗೆ 23 ಬಾರಿ ಭೇಟಿ ನೀಡಿ ಶಾಪಗ್ರಸ್ತ ಜಿಲ್ಲೆ ಎಂಬ ಮೌಢ್ಯವನ್ನು ತೊಲಗಿಸಿದರು. ಇದಲ್ಲದೇ ಜಿಲ್ಲೆಯ ಅಭಿವೃದ್ಧಿಗೆ 280 ಕೋಟಿ ರೂ ಮೌಲ್ಯದ ಕುಡಿಯುವ ನೀರಿನ ಯೋಜನೆ ಸೇರಿ ಒಟ್ಟು 800 ಕೋಟಿ ರೂ ಮೊತ್ತದಷ್ಟು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿರುವುದು ಹೆಮ್ಮೆಯ ಸಂಗತಿ. ಸ್ವತಃ ಸಿದ್ಧರಾಮಯ್ಯನವರೇ ಹೇಳಿರುವಂತೆ 'ಚಾಮರಾಜನಗರವು ಪ್ರತ್ಯೇಕ ಜಿಲ್ಲೆಯಾಗಿದ್ದರೂ ನಾನದನ್ನು ಇನ್ನೂ ಮೈಸೂರಿನ ಭಾಗವಾಗಿಯೇ ನೋಡುತ್ತೇನೆ ಮತ್ತು ನಾನು ಚಾಮರಾಜನಗರಕ್ಕೆ ಅತ್ಯಂತ ಸಂತಸ ಹಾಗೂ ಪ್ರೀತಿಯಿಂದ ಆಗಮಿಸುತ್ತೇನೆ' ಎಂದು ಹೇಳಿರುವುದು ಇಂದಿಗೂ ಪ್ರಸ್ತುತ ಎನಿಸುತ್ತದೆ.

ಜಿಲ್ಲೆಯ ರಚನೆಯ ನಂತರ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಜಿಲ್ಲೆಯನ್ನು ಅಭಿವೃದ್ಧಿಪಡಿಸಲು ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಅರಣ್ಯ ಇಲಾಖೆ, ಕೈಗಾರಿಕ ಇಲಾಖೆ, ಕಾರ್ಮಿಕ ಇಲಾಖೆ, ಅಬಕಾರಿ ಇಲಾಖೆ, ಹೈನುಗಾರಿಕೆ ಮತ್ತು ಪಶು ಸಂಗೋಪನೆ ಇಲಾಖೆ, ಕೃಷಿ ಉತ್ಪನ್ನ ಮಾರುಕಟ್ಟೆ ಕೇಂದ್ರಗಳು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳು, ಸಮಾಜ ಕಲ್ಯಾಣ ಇಲಾಖೆಗಳು, ವೈದ್ಯಕೀಯ ಕೇಂದ್ರ, ಆಹಾರ ಮತ್ತು ನಾಗರೀಕ ಸರಬರಾಜು ಕೇಂದ್ರ, ಮಣ್ಣು ಸಂಶೋಧನಾ ಕೇಂದ್ರ, ಭೂ ಮತ್ತು ಗಣಿಗಾರಿಕೆ ಇಲಾಖೆ ಹೀಗೆ ಇನ್ನೂ ಮುಂತಾದ ಅನೇಕ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಅಭಿವೃದ್ಧಿ ನಿಗಮಗಳು ಜಿಲ್ಲೆಯಲ್ಲಿ ಕಾರ್ಯ ಪ್ರವೃತ್ತವಾಗಿ ಅಭಿವೃದ್ಧಿಪಡಿಸಲು ಸಮರ್ಥವಾಗಿದೆ.

ಹಾಗೆಯೇ ಜಿಲ್ಲೆಯ ಅಭಿವೃದ್ಧಿಗಾಗಿ 1997 ರಿಂದ 2022 ರವರೆಗೆ ಹಲವಾರು ಯೋಜನೆಗಳನ್ನು ಜಾರಿ ಮಾಡಿದ್ದಾರೆ. ಅವುಗಳೆಂದರೆ ಪಂಚವಾರ್ಷಿಕ ಯೋಜನೆಗಳು, ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಜಿಲ್ಲಾ ಪರಿಸರ ಯೋಜನೆ, ಪ್ರಧಾನಮಂತ್ರಿ ರಸ್ತೆ ಯೋಜನೆ, ಅನಿಲ ಯೋಜನೆ, ಭಾಗ್ಯಲಕ್ಷ್ಮೀ ಯೋಜನೆ, ಕೌಶಲ್ಯ ತರಭೇತಿ ಕೇಂದ್ರಗಳು, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ, ಉದ್ಯಮಶೀಲ ಯೋಜನೆ, ಸ್ವಯಂ ಉದ್ಯೋಗ ಯೋಜನೆ, ನರ್ಸರಿ ಮತ್ತು ಕಲ್ಯಾಣ ಕೇಂದ್ರಗಳು, ಮೆಟ್ರಿಕ್ ಪೂರ್ವ

ವಿದ್ಯಾರ್ಥಿನಿಲಯ, ವಸತಿ ಮತ್ತು ಆಶ್ರಮ ಶಾಲೆಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸಂಜೀವಿನಿ ಪಶ್ಚಿಮ ಘಟ್ಟದ ಅಭಿವೃದ್ಧಿ ಕಾರ್ಯಕ್ರಮ, ಸುವರ್ಣ ಗ್ರಾಮೋದಯ, ಗ್ರಾಮ ಸ್ವರಾಜ್, ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ, ಗ್ರಾಮ ಸಾಕ್ಷರತೆ ಯೋಜನೆ, ಗ್ರಾಮ ಕ್ರಿಯಾತ್ಮಕ ಯೋಜನೆ, ಸಾಕ್ಷರತಾ ಯೋಜನೆ, ಅಕ್ಷರದೀಪ ಸಂಪೂರ್ಣ ಸಾಕ್ಷರತಾ ಯೋಜನೆ, ಸರ್ವ ಶಿಕ್ಷಣ ಅಭಿಯಾನ, ಕ್ಷೀರಭಾಗ್ಯ, ಅನ್ನಭಾಗ್ಯ, ಪ್ರಧಾನಮಂತ್ರಿ ಅವಾಸ್ ಯೋಜನೆ, ಕನ್ನಡ ನಾಡು ಸಾಕ್ಷರ ನಾಡು ಎಂಬ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದ ಯೋಜನೆಯನ್ನು ಜಾರಿಗೆ ತರುವುದರ ಮೂಲಕವಾಗಿ ಜಿಲ್ಲೆಯ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಲು ಪ್ರಯತ್ನಿಸಲಾಗುತ್ತಿದೆ.

ನಾಡು ಕಂಡ ಹೆಮ್ಮೆಯ ರಾಜಕಾರಿಣಿ ಬಿ.ರಾಚಯ್ಯ ಹಾಗೂ ದಲಿತ ಧ್ವನಿ ಅವರು ಬುದ್ಧರ ಮಾರ್ಗವಾಗಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಆದರ್ಶ, ಮೌಲ್ಯಗಳನ್ನು ಮೈಗೂಡಿಸಿಕೊಂಡು ರಾಜಕಾರಣ ಮಾಡಿದ ರಾಚಯ್ಯನವರು ಚಾಮರಾಜನಗರ ಜಿಲ್ಲೆಯ ಹರಿಕಾರ ಎಂದು ಹೇಳಬಹುದು. ಅಂದಿನ ಕಾಲಘಟ್ಟದಲ್ಲಿ ದಲಿತ ರಾಜಕಾರಣದಲ್ಲಿ ಹೆಸರು ಮಾಡಿದ ಧೀಮಂತ ನಾಯಕರಾಗಿದ್ದರು. ಇವರು ಶಿಕ್ಷಣ ಸಚಿವರಾಗಿ ಸಮಗ್ರ ಶಿಕ್ಷಣ ನೀತಿ ಜಾರಿಗೆ ತಂದು ಶಿಕ್ಷಣ ಕ್ರಾಂತಿ ಮಾಡಿದರು. ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಸವಲತ್ತು ಕಲ್ಪಿಸಲು ಅವರ ಏಳಿಗೆಗಾಗಿ ಜಿಲ್ಲೆಯ ಪ್ರಗತಿಗಾಗಿ ಪಣತೊಟ್ಟಿದ್ದರು. ಇವರು ಸುವರ್ಣಾವತಿ ಜಲಾಶಯ ಮತ್ತು ಚಿಕ್ಕಹೊಳೆ ಜಲಾಶಯಗಳಿಗೆ ಅಣೆಕಟ್ಟೆ ಕಟ್ಟಿ ನೀರಾವರಿ ಯೋಜನೆಯನ್ನು ಅಭಿವೃದ್ಧಿ ಪಡಿಸಿದ ಕೀರ್ತಿ ಬಿ.ರಾಚಯ್ಯನವರಿಗೆ ಸಲ್ಲುತ್ತದೆ ಹಾಗೂ ಜಿಲ್ಲೆಯಲ್ಲಿ ಜನಮನವನ್ನು ಗೆದ್ದಂತಹ ಲೋಕಸಭೆಯ ಸದಸ್ಯರು ಹಾಗೂ ವಿಧಾನಸಭೆಯ ಸದಸ್ಯರು ಆಗಿದ್ದಂತಹ ಶ್ರೀ ವಿ.ಶ್ರೀನಿವಾಸ ಪ್ರಸಾದ್ ರವರು ಕೇಂದ್ರ ಮತ್ತು ರಾಜ್ಯದಲ್ಲಿ ಸಚಿವರಾಗಿ ತಮ್ಮದೇ ಆದ ರಾಜಕೀಯ ವರ್ಚಸ್ಸನ್ನು ಹೊಂದಿದವರಾಗಿದ್ದಾರೆ. ಎಸ್.ಎಂ.ಸಿದ್ಧಯ್ಯ, ಬಿ.ರಾಚಯ್ಯ, ವಿ.ಸಿದ್ದರಾಜು, ಎಂ.ಸಿ.ಬಸಪ್ಪ, ಎಸ್.ಪುಟ್ಟಣ್ಣಯ್ಯ, ಸಿ.ಗುರುಸ್ವಾಮಿ, ಧ್ರುವನಾರಾಯಣ್, ಎಸ್.ಜಯಣ್ಣ, ವಾಟಾಳ್ ನಾಗರಾಜ್, ಹೆಚ್.ಎಸ್.ಮಹದೇವಪ್ರಸಾದ್, ಕಾಗಲವಾಡಿ ಶಿವಣ್ಣ ಮತ್ತು ಪುಟ್ಟರಂಗಶೆಟ್ಟಿ ಇವರು ಜನಪ್ರತಿನಿಧಿಗಳಾಗಿ ಜಿಲ್ಲೆಯ ಅಭಿವೃದ್ಧಿಗೆ ತಮ್ಮದೇ ಆದಂತಹ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಜಿಲ್ಲಾ ರಚನೆಯ ಸಂದರ್ಭದಲ್ಲಿ ಜನರ ಬೆಂಬಲ ಪ್ರಗತಿಯ ದೂರ ದೃಷ್ಟಿ, ಅಭಿವೃದ್ಧಿಯ ಉದ್ದೇಶ ಹಾಗೂ ಆಡಳಿತದ ಅನುಕೂಲಕ್ಕಾಗಿ ಜಿಲ್ಲೆಯ ರಚನೆಯನ್ನು ಮಾಡಬೇಕೆಂದು ಒಕ್ಕೊರಲಿ ಅಭಿಪ್ರಾಯದ ಮೇರೆಗೆ ಚಾಮರಾಜನಗರ ಜಿಲ್ಲೆಯನ್ನು ರಚಿಸಲು ಕಾರಣವಾಯಿತು.

ಜಿಲ್ಲೆಯಲ್ಲಿ ಹೆಚ್ಚಿನ ಜನತಾ ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿದ್ದು, ಬಹುತೇಕರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಾಗಿದ್ದಾರೆ. ಇವರ ಪರಿಸ್ಥಿತಿಯು ಈಗಲೂ ಸಹ ಸುಧಾರಿಸಿಲ್ಲ. ಸ್ವಾತಂತ್ರ್ಯ ಬಂದು 75ರ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದರು ಸಹ ಜನರು ತಮ್ಮ ಜೀವನ ನಿರ್ವಹಣೆಗಾಗಿ ಪರಿತಪಿಸುತ್ತಿದ್ದಾರೆ. ಬೆಟ್ಟಗುಡ್ಡದ ತಪ್ಪಲಿನಲ್ಲಿ ವಾಸಿಸುವಂತಹ ಬುಡಕಟ್ಟು ಸಮುದಾಯಗಳಾದ ಅಕ್ಕಿಪಿಕ್ಕಿ ಜನಾಂಗ, ಯರವರು, ಸೋಲಿಗ ಸಮುದಾಯ, ಹಾಡಿಜನ, ಜೇನು ಕುರುಬ, ಕಾಡು ಕುರಬ, ಲಂಬಾಣಿ ಮತ್ತು ವಡ್ಡರು ತಮ್ಮ ಜೀವನವನ್ನು ನಿರ್ವಹಿಸಲು ಕೂಲಿಯನ್ನೇ ಅವಲಂಭಿಸಿದ್ದಾರೆ. ಇವರ ಜೀವನ ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆಯಾಗಿಲ್ಲ. ಸರ್ಕಾರದ ಯೋಜನೆಗಳು ಸರಿಯಾದ ರೀತಿಯಲ್ಲಿ ತಲುಪಿದ್ದರೆ ಈ ದುಸ್ಥಿತಿ ಬರುತ್ತಿರಲಿಲ್ಲ. 1947 ರಲ್ಲಿ ಪಡೆದ ಸ್ವಾತಂತ್ರ್ಯವು ಅದು ಸ್ವಾತಂತ್ರ್ಯವಲ್ಲ ಅದು ಬ್ರಿಟಿಷರಿಂದ ಪಡೆದ ಮುಕ್ತಿ ಅಷ್ಟೇ? ಆದರೆ

ಸ್ವಾತಂತ್ರ್ಯ ಸಮಾನತೆ, ಸಾಮಾಜಿಕ ನ್ಯಾಯ, ಹಕ್ಕು ಮತ್ತು ಅಧಿಕಾರಗಳು ಇನ್ನೂ ಕೂಡ ಜನರಿಗೆ ದಕ್ಕಿಲ್ಲ.

ಈಗಾಗಲೇ ಚಾಮರಾಜನಗರ ಜಿಲ್ಲೆಯಲ್ಲಿ ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕ ಪ್ರದೇಶ ಅಭಿವೃದ್ಧಿಯಾಗಿದ್ದು, ಅದಕ್ಕೆ ಬೇಕಾದ ಮೂಲಭೂತ ಸೌಕರ್ಯದ ಕೊರತೆಗಳಿಂದಾಗಿ ಅದು ತುಸು ಹಿನ್ನಡೆಯನ್ನು ಅನುಭವಿಸುತ್ತಿದ್ದು, ಸರಿಯಾದ ರೀತಿಯಲ್ಲಿ ಮೂಲಭೂತ ಸೌಕರ್ಯವನ್ನೊದಗಿಸಿದ್ದರೆ ಕೈಗಾರಿಕೆ ಅಭಿವೃದ್ಧಿಯಾಗುವುದು, ಇದರಿಂದ ಜಿಲ್ಲೆಯ ಜನರಿಗೆ ಉದ್ಯೋಗ ದೊರಕಿದಂತಾಗಿ ಕೆಲಸಕ್ಕಾಗಿ ಬೇರೆ ಬೇರೆ ಜಿಲ್ಲೆಗಳಿಗೆ ವಲಸೆ ಹೋಗುವುದು ತಪ್ಪುತ್ತದೆ, ಜೊತೆಗೆ ಕೃಷಿ ಆಧಾರಿತ ಕೈಗಾರಿಕೆ ಸ್ಥಾಪಿಸುವುದರಿಂದ ಇಲ್ಲಿನ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ಅದರಿಂದ ಅವರು ಅಭಿವೃದ್ಧಿಯತ್ತ ಸಾಗಲು ಹೊಸ ಮಾರ್ಗ ಸೃಷ್ಠಿಯಾದಂತಾಗುವುದು. ಈ ನಿಟ್ಟಿನಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರವು ಗಮನಹರಿಸಿ ಹೆಚ್ಚಿನ ಅನುದಾನವನ್ನು ಇದಕ್ಕೆ ಮೀಸಲಿಡಬೇಕಾದುದು ಇಂದಿನ ತುರ್ತಾಗಿದೆ.

ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಾಗಿ ಜಿಲ್ಲೆಯವರಾದ ಮಹಾದೇವ ಶಂಕನಪುರ ಅವರು ಜಿಲ್ಲೆಯ ವಿವಿಧ ಜನಪದ ಕಲಾ ಪ್ರಕಾರದ ಕಲಾವಿದರನ್ನು ಸಂದರ್ಶಿಸಿ ವ್ಯಕ್ತಿಚಿತ್ರಣ, ಆಯಾ ಕಲೆಯ ವೈಶಿಷ್ಟ್ಯತೆ ಇತ್ಯಾದಿಗಳನ್ನು ದಾಖಲಿಸಿ ಕೊಟ್ಟಿದ್ದಾರೆ. ಈ ಪಟ್ಟಿಯಲ್ಲಿರುವ ಅನೇಕ ಕಲಾ ಪ್ರಕಾರದ ಕಲಾವಿದರನ್ನು ಸಂದರ್ಶಿಸಿ ವ್ಯಕ್ತಿ ಚಿತ್ರಣ, ಆಯಾ ಕಲೆಯ ವೈಶಿಷ್ಟ್ಯತೆ ಇತ್ಯಾದಿಗಳನ್ನು ದಾಖಲಿಸಿ ಕೊಟ್ಟಿದ್ದಾರೆ. ಈ ಪಟ್ಟಿಯಲ್ಲಿರುವ ಅನೇಕ ಕಲಾವಿದರು ರಾಜ್ಯಮಟ್ಟದಲ್ಲಿ ಅಲ್ಲದೇ ವಿದೇಶಗಳಲ್ಲೂ ಕಲಾಪ್ರದರ್ಶನ ನೀಡಿದ್ದಾರೆ. ಮಳವಳ್ಳಿ ಮಹದೇವರವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್‌ನ್ನು ನೀಡಿ ಗೌರವಿಸಿದೆ. ಜಿಲ್ಲೆಯ ನವ ಯುವ ಸಾಹಿತಿಗಳು, ಬರಹಗಾರರು, ಸಂಶೋಧಕರು ಸೃಷ್ಠಿಯಾಗಿದ್ದಾರೆ. ಈ ಮೂಲಕ ಜಿಲ್ಲೆಯನ್ನು ಸಾಂಸ್ಕೃತಿಕ ನೆಲೆಯಾಗಿ ರೂಪಿಸಲು ಪುಷ್ಠಿಯನ್ನು ನೀಡುತ್ತಿದ್ದಾರೆ.

ಚಾಮರಾಜನಗರ ಜಿಲ್ಲೆಯ ರಚನೆಯ ನಂತರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕವಾಗಿ ಅಭಿವೃದ್ಧಿ ಹೊಂದುವ ಹಾದಿಯತ್ತ ಸಾಗುವಲ್ಲಿ ಹಲವಾರು ಯೋಜನೆಗಳು, ರಾಜಕೀಯ ನಾಯಕರು, ಅಧಿಕಾರಿಗಳು ಸ್ವಯಂ ಸೇವಾ ಸಂಸ್ಥೆಗಳು, ಇಲ್ಲಿನ ಕಲೆ, ಸಾಹಿತ್ಯ, ಸಂಸ್ಕೃತಿ, ಆಚಾರ–ವಿಚಾರ ಮತ್ತು ಪ್ರಾಕೃತಿಕ ಸಂಪತ್ತು ಇನ್ನೂ ಮುಂತಾದ ಎಲ್ಲಾ ಅಂಶಗಳು ಬಹುಮುಖ್ಯ ಪಾತ್ರವಹಿಸುತ್ತಿವೆ. ಜಿಲ್ಲೆಯು ಅಭಿವೃದ್ಧಿಯತ್ತ ಸಾಗುತಲಿದ್ದು ಅದಕ್ಕೆ ಮತ್ತಷ್ಟು ಸಹಕಾರದ ಅವಕಾಶಬೇಕೆಂದು ಈ ಮೂಲಕ ತಿಳಿಯಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- *ಚಾಮರಾಜನಗರ ಜಿಲ್ಲಾ ಅಂಕಿ–ಅಂಶಗಳ ನೋಟ 2020–21.* (2021). ಜಿಲ್ಲಾ ಸಂಖ್ಯಾ ಸಂಗ್ರಹಣ ಇಲಾಖೆ. ಕರ್ನಾಟಕ ಸರ್ಕಾರ.
- *ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್.* (2015). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- ಮಲೆಯೂರು ಗುರುಸ್ವಾಮಿ (ಪ್ರ.ಸಂ) & ಸೋಮಶೇಖರ್ ಬಿಸಲ್ವಾಡಿ. (ಸಂ.) (2007). *ಹೊನ್ನು ಹೊಳೆ, ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ–2007.*
- ಪಳನಿಸ್ವಾಮಿ. (2011). *ಗುಂಡ್ಲುಪೇಟೆ ತಾಲ್ಲೂಕು ಒಂದು ಸಾಂಸ್ಕೃತಿಕ ಅಧ್ಯಯನ.* ಸ್ಕಂದಶ್ರೀ ಪ್ರಕಾಶನ.
- Basavaraj, S., & Yogish, S. N. (2019). Agricultural development and diversification of Chamarajanagara District in Karnataka. *IJIREMP*, *7*(1).
- Mahadevaprasad, K.N., & Srikantaprasad, S. (2019). A geographical analysis of agricultural conditions in Chamarajanagara District. *Geographical Analysis*, *8*(1), 1–4.